ಸಾಕ್ಷಿಯನ್ನು ಪ್ರಮಾಣಿಕರಿಸಿದ ದಿನಾಂಕಃ 15.03.2024

**ಪಾಟೀಸವಾಲು ಪ್ರತಿವಾದಿಯರ ಪರ ಶ್ರೀ ಕೆ.ವಿ.ಎ ವಕೀಲರಿಂದಃ**

ನಿಪಿ-19 ರಿಂದ 21 ರಲ್ಲಿ ಬಾಳಮ್ಮಳ ಹೆಸರು ಯಾವ ಆಧಾರದ ಮೇಲೆ ಬಂದಿರುತ್ತದೆ ಗೊತ್ತಿಲ್ಲ. 2 ನೇ ವಾದಿಯ ಗಂಡ ಕನಕನಗೌಡ ತೀರಿಕೊಂಡಿರುತ್ತಾನೆ. ಆತ ದಿನಾಂಕ 29.09.2014 ರಂದು ತೀರಿಕೊಂಡಿರುತ್ತಾನೆ. ಆತ ತೀರಿಕೊಂಡಾಗ ಆತನ ವಯಸ್ಸು ಸುಮಾರು 70 ರಿಂದ 75 ವರ್ಷ ವಯಸ್ಸು ಇತ್ತು. ಆತನ ವಯಸ್ಸಿನ ಕುರಿತು ಯಾವುದೇ ದಾಖಲೆ ಹಾಜರುಪಡಿಸಿಲ್ಲ. ಆದರೆ ಮರಣ ಪ್ರಮಾಣ ಪತ್ರ ಹಾಜರುಪಡಿಸಿರುತ್ತೇವೆ. ನಿಪಿ-22 ಮತ್ತು 23 ರಲ್ಲಿ ಕನಕನಗೌಡನ ತಂದೆ ಭೀಮನಗೌಡನ ಹೆಸರು ನಮೂದು ಇದೆ. ಆತನ ಹೆಸರಿನ ಪೂರ್ವದಲ್ಲಿ ಆ ಜಮೀನು ಬಾಳಮ್ಮ ಗಂಡ ಕನಕನಗೌಡನ ಹೆಸರಿನಲ್ಲಿತ್ತು. ಬಾಳಮ್ಮಳ ಹೆಸರಿನಿಂದ ಕನಕನಗೌಡನ ಹೆಸರಿಗೆ ಆದ ಮ್ಯುಟೇಶನ ಪ್ರತಿಯನ್ನು ವಕೀಲರಿಗೆ ಕೊಟ್ಟಿರುತ್ತೇವೆ ಅವರು ಅದನ್ನು ಈ ದಾವೆಯಲ್ಲಿ ಹಾಜರುಪಡಿಸಿದ ಬಗ್ಗೆ ಗೊತ್ತಿಲ್ಲ. ನಿಪಿ-22 ಮತ್ತು 23 ರಲ್ಲಿ ನಮೂದು ಆದ ಕನಕನಗೌಡ ತಂದೆ ಭೀಮನಗೌಡ 2 ನೇ ವಾದಿಯ ಗಂಡ ಇರುವುದಿಲ್ಲ ಆದರೆ ಆತ ಪ್ರತಿವಾದಿಯರ ಕುಟುಂಬದ ಮೂಲ ಪುರುಷ ಕನಕನಗೌಡ ಇರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರ ಕುಟುಂಬದ ಮೂಲ ಪುರುಷ ಹಾಗೂ 2 ನೇ ವಾದಿಯ ಗಂಡನ ಹೆಸರು ಒಂದೆ ಇರುವುದನ್ನು ದುರುಪಯೋಗಪಡಿಸಿಕೊಂಡು ನಿಪಿ-22 ಮತ್ತು 23 ರಲ್ಲಿ ಕಾಣಿಸಿರುವ ಹೆಸರು 2 ನೇ ವಾದಿಯ ಗಂಡ ಅಂತಾ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸರ್ವೆ ನಂ. 9 ಹಿಸ್ಸಾ 4 ಬಿ ಜಮೀನು ನಿಪಿ-24 ಹಾಗೂ 24 ರಲ್ಲಿ ಮಾಸನಗೌಡನ ಹೆಸರಿನಲ್ಲಿರುತ್ತದೆ. ಮಾಸನಗೌಡನ ಹೆಸರಿಗೆ ಆಗುವ ಪೂರ್ವದಲ್ಲಿ

ಈ ಜಮೀನು ನನ್ನ ದೊಡ್ಡಪ್ಪನಾಗದ ಕನಕನಗೌಡ ತಂದೆ ಭೀಮನಗೌಡನ ಹೆಸರಿನಲ್ಲಿತ್ತು. ಈ ಕುರಿತು ಮ್ಯುಟೇಶನ ಪ್ರತಿಯನ್ನು ವಕೀಲರಿಗೆ ಕೊಟ್ಟಿರುತ್ತೇನೆ. ಅವರು ಅದನ್ನು ಹಾಜರುಪಡಿಸಿದ ಬಗ್ಗೆ ಗೊತ್ತಿಲ್ಲ. ಮಾಸನಗೌಡನಿಗೆ ಆ ಜಮೀನಿನ ಮೇಲೆ ಯಾವುದೇ ಹಕ್ಕು ಇಲ್ಲದೆ ಇದ್ದರು 2ನೇ ವಾದಿಯ ಗಂಡನ ಹೆಸರು ಸಹ ಕನಕನಗೌಡನ ಇರುವುದನ್ನು ದುರುಪಯೊಗಪಡಿಸಿಕೊಂಡು ಮಾಸನಗೌಡನ ಹೆಸರಿಗೆ ಖೊಟ್ಟಿ ಮ್ಯುಟೇಶನ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಮಾಸನಗೌಡನ ಹೆಸರಿಗೆ ಸರ್ವೆ ನಂ. 9 ಹಿಸ್ಸಾ 4 ಇದ್ದರು ಸಹ ನಾನಾಗಲಿ ನಮ್ಮ ದೊಡ್ಡಪ್ಪನಾಗಲಿ ಆ ಜಮೀನಿನ ಕಬ್ಜೆಯಲ್ಲಿ ಯಾವತ್ತು ಇರುವುದಿಲ್ಲ ಎಂದರೆ ಸರಿಯಲ್ಲ. ಪಹಣಿಯಲ್ಲಿ ಹೆಸರುಗಳ ಸಾಮ್ಯತೆ ಇರುವುದನ್ನು ದುರುಪಯೋಗಪಡಿಸಿಕೊಂಡು ಅಸಲು ದಾವೆ 354/2016 ರಲ್ಲಿ ಡಿಕ್ರಿ ಪಡೆದಿರುತ್ತೇವೆ ಎಂದರೆ ಸರಿಯಲ್ಲ. ಯಾವತ್ತೂ ದಾವಾ ಆಸ್ತಿಯ ಮಾಲೀಕರು ಮತ್ತು ಕಬ್ಜೆದಾರರು ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ದಾವಾ ಆಸ್ತಿಯ ಮಾಲೀಕರು ಮತ್ತು ಕಬ್ಜೆದಾರರು ಇರುತ್ತಾರೆ ಎಂದರೆ ಸರಿಯಲ್ಲ. ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷಿನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು, ಕುಷ್ಟಗಿ**